# ಕೃಷಿ ವಿಶ್ವ ವಿದ್ಯಾನಿಲಯ
## ಕೃಷಿ ಹವಾಮಾನ ಕ್ಷೇತ್ರ ವಿಭಾಗ (IMD)
### ಜಿ.ಕೆ.ವಿ.ಕೆ., ಬೆಂಗಳೂರು–560065
### * ಗ್ರಾಮೀಣ ಕೃಷಿ ಹವಾಮಾನ ಸೇವಾ ವರದಿ ಪತ್ರಿಕೆ *

**ದಿನಾಂಕ:** 08.08.2023

## ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸೀಮಿತವಾಗಿದೆ

### ಈ ವಾರದ ಹವಾಮಾನ ಮುನ್ಸೂಚನೆ(ಭಾರತೀಯ ಹವಾಮಾನ ಇಲಾಖೆ)

(ದಿನಾಂಕ **09-08-2023** ರಿಂದ **13-08-2023** ವರೆಗೆ)

| ನಿಯತಾಂಕಗಳು | 09.08.2023 | 10.08.2023 | 11.08.2023 | 12.08.2023 | 13.08.2023 |
|---|---|---|---|---|---|
| ಮಳೆ (ಮಿ ಮಿ) | 1 | 1 | 1 | 0 | 1 |
| ಗರಿಷ್ಠ ಉಷ್ಣಾಂಶ °(ಡಿ.ಸೆ. ) | 30 | 29 | 29 | 29 | 29 |
| ಕನಿಷ್ಠ ಉಷ್ಣಾಂಶ (ಡಿ.ಸೆ. ) | 20 | 20 | 20 | 20 | 20 |
| ಮೋಡ (ಪ್ರಮಾಣ) | 6 | 6 | 6 | 6 | 6 |
| ಅರ್ದ್ರತೆ 7.20 ಬೆ (ಶೇ) | 86 | 86 | 86 | 86 | 86 |
| ಅರ್ದ್ರತೆ 2.20 ಮ (ಶೇ) | 51 | 51 | 51 | 51 | 51 |
| ಗಾಳಿಯ ವೇಗ (ಕಿ.ಮಿ/ಗಂಟೆಗೆ) | 6 | 5 | 4 | 4 | 5 |
| ಗಾಳಿಯ ದಿಕ್ಕು ( ಡಿಗ್ರಿ) | 283 | 291 | 292 | 292 | 291 |

ಭಾರತೀಯ ಹವಾಮಾನ ಇಲಾಖೆಯ ಪ್ರಕಾರ ಮುಂದಿನ ನಾಲ್ಕೈದು ದಿನಗಳಲ್ಲಿ ಹಗುರ ಮಳೆಯಾಗುವ ಸಾಧ್ಯತೆ ಇದೆ. ದಿನದ ಗರಿಷ್ಠ ಉಷ್ಣಾಂಶ **29.0-30.0°C** ಮತ್ತು ಕನಿಷ್ಠ **20.0°C** ಇರುವ ಸಾಧ್ಯತೆ ಇದೆ. ಬೆಳಗಿನ ಆರ್ದ್ರತೆ ಪ್ರಮಾಣ ಶೇ **86 %** ಇದ್ದು ಮಧ್ಯಾಹ್ನ **51 %** ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ **4-6** ಕಿ.ಮೀ. ವೇಗದಲ್ಲಿ ಬೀಸುವ ಸ೦ಭವವಿದೆ.

"ಆಶ್ಲೇಷ ಮಳೆ ನಿಶ್ಶೇಷ ಮಳೆ!"

- ಆಶ್ಲೇಷ ನಕ್ಷತ್ರದ ಮಳೆಯ ಕಾಲವು ಆಗಸ್ಟ್ ತಿಂಗಳ 03 ರಿಂದ ಆಗಸ್ಟ್ 16 ರ ವರೆಗೆ ಇರುತ್ತದೆ. ಈ ನಕ್ಷತ್ರದ ಪೂರ್ವ ಒಣ ವಲಯದ ಸರಾಸರಿ ಮಳೆಯು 54.3 ಮಿ.ಮೀ. ವರೆಗೆ ಮಳೆಯಾಗುತ್ತದೆ.

**ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ**

| ಬೆಳೆಗಳು | ಬೆಳೆಯ ಹಂತ | ಕೃಷಿ ಸಲಹೆಗಳು |
|---|---|---|
| **ಸಾಮಾನ್ಯ** | | • ತೇವಾಂಶದ ಆಧಾರದಲ್ಲಿ ಮುಂಗಾರು ಬಿತ್ತನೆಯನ್ನು ಮುಂದುವರಿಸಿ. ಆಯಾ ವಲಯ ಪ್ರದೇಶಕ್ಕೆ ಶಿಫಾರಸ್ಸು ಮಾಡಿದ ತಳಿಗಳನ್ನೇ ಬಿತ್ತನೆಗೆ ಬಳಸುವುದು ಸೂಕ್ತ.<br>• ಕಳೆದ ತಿಂಗಳಿನಿಂದ ಕಡಿಮೆ ಮಳೆಯಿಂದ ಮಣ್ಣಿನಲ್ಲಿ ತೇವಾಂಶದ ಕೊರತೆಯಿದ್ದು ನಿರ್ವಹಣೆಗಾಗಿ ಅಂತರ ಬೇಸಾಯ ಮಾಡಿ, ಬುಡಕ್ಕೆ ಮಣ್ಣನ್ನು ಸೇರಿಸಿ ಇದರಿಂದ ತೇವಾಂಶ ಸಂರಕ್ಷಣೆಯಾಗುತ್ತದೆ.<br>• ಗೊಬ್ಬರದ ಗಿಡಗಳನ್ನು ಮತ್ತು ಕಳೆಗಿಡಗಳನ್ನು ಭೂ ಹೊದಿಕೆಯಾಗಿ ಬೆಳೆಗಳಿಕೆ ಹಾಕಿ ಇದರಿಂದ ಗೊಬ್ಬರ ಮತ್ತು ತೇವಾಂಶದ ಸಂರಕ್ಷ ಣೆಯಾಗುತ್ತದೆ. |
| **ಮುಂಗಾರು ಬೆಳೆಗಳು** | ಬಿತ್ತನೆ ಮತ್ತು ಮೊಳಕೆ, ಬೆಳವಣಿಗೆ ಹಂತ | **ಈ ಕೆಳಗಿನ, ತಳಿಗಳನ್ನು ಬಿತ್ತನೆ ಮಾಡಲು ಸೂಚಿಸಲಾಗಿದೆ**<br>ರಾಗಿ : ಜಿ.ಪಿ.ಯು–26,28 ಮತ್ತು 66, ಹೆಚ್.ಆರ್–911, ಎಂ.ಎಲ್–365, ಕೆ.ಎಂ.ಆರ್–204<br>ಅಲಸಂದೆ : ಟಿ.ವಿ.ಎಕ್ಸ್–944, ಕೆ.ಬಿ.ಸಿ–1<br>ಹೆಸರು :ಪಿ.ಎಸ್–16, ಪಿ.ಡಿ.ಎಮ್–84, 178 , ಉದ್ದು: ಕರಗಾವ್–3, ಟಿ–9, ರಶ್ಮಿ<br>➢ ತೊಗರಿ, ಹರಳು ಬಿತ್ತನೆಯಾಗಿದ್ದಲ್ಲಿ ಸಾಲುಗಳ ಮಧ್ಯದಲ್ಲಿರುವ ಮಣ್ಣನ್ನು ಗಿಡದ ಬುಡಕ್ಕೆ ಹಾಕುವುದರಿಂದ ಭೂಮಿಯು ದಿಂಡು ಸಾಲಾಗಿ ಪರಿವರ್ತನೆಯಾಗುತ್ತದೆ ಇದರಿಂದ ಗಿಡಗಳಿಗೆ ಹೆಚ್ಚು ಸಿಗುವಂತಾಗಿ ಒಣಹವೆಯ ಅನಾನುಕೂಲತೆಯನ್ನು ಮುಂದೂಡಬಹುದು.<br>➢ ಈಗಾಗಲೇ ಬಿತ್ತನೆಯಾಗಿರುವ ತೊಗರಿ ಮತ್ತು ಜೋಳದ ಬೆಳೆಗಳಲ್ಲಿ ಮೇಲು ಗೊಬ್ಬರವನ್ನು ಕೊಡಬೇಕು.<br>➢ ಶೇಂಗಾ ಬೆಳೆಯಲ್ಲಿ ಹೂವಿನ ಹಂತದಲ್ಲಿ ಶಿಫಾರಿಸ್ಸಿದ ಜಿಪ್ಸಂ ಅನ್ನು ಬೆಳೆಗಳಿಗೆ ಕೊಡಿ. |
| **ಮಾವು** | | ➢ ಕಳೆ ನಿರ್ವಹಣೆಗೆ ಮತ್ತು ಭೂಮಿಯಲ್ಲಿನ ತೇವಾಂಶವನ್ನು ಸಂರಕ್ಷಿಸಲು ಅಂತರ ಬೇಸಾಯ ಮಾಡಬೇಕು. |

| | |
|---|---|
| **ಪಶುಸಂಗೋಪನೆ** | 1. ಹೆಚ್ಚು ಕರಾವು ಕೊಡುವ ರಾಸುಗಳ ಆಹಾರದಲ್ಲಿ ಕನಿಷ್ಠ ಶೇ. 17 ರಷ್ಟು ನಾರಿನ ಅಂಶವಿರಬೇಕು ( ಎನ್.ಡಿ.ಎಫ್. ಶೇ.22 ರಷ್ಟಿರಬೇಕು.)<br>2. ಹೆಚ್ಚು ಪಶು ಆಹಾರ ತಿನ್ನಿಸುವ ಸಮಯದಲ್ಲಿ ಅದನ್ನು 3–4 ಸಮಭಾಗ ಮಾಡಿ ನಿತ್ಯ ನಾಲ್ಕು ಬಾರಿ ತಿನ್ನಿಸುವುದು ಉತ್ತಮ.<br>3. ಬೆಳೆಯಲ್ಲಿ ಶೇ. 65–70 ರಷ್ಟು ತೇವಾಂಶ ಇರಬೇಕು. ತೇವಾಂಶ ಇದಕ್ಕಿಂತಲೂ ಕಡಿಮೆಯಾದರೆ ಹುದುಗುವಿಕೆ ವಿಫಲಗೊಂಡು ಕಳಪೆ ಗುಣಮಟ್ಟದ ಕಂದು ಬಣ್ಣದ ರಸಮೇವು ತಯಾರಾಗುತ್ತದೆ. ಇದೇ ರೀತಿ ಮೇವಿನಲ್ಲಿ ತೇವಾಂಶ ಶೇ.70 ಕ್ಕಿಂತಲೂ ಹೆಚ್ಚಿದ್ದರೆ ರಸಸಾರ ಹೆಚ್ಚಾಗಿ ಮೇವು ಹುಳಿಯಾಗಿ ಕೊಳೆತ ವಾಸನೆಯಿಂದ ಕೂಡಿರುತ್ತದೆ. |

**ನೋಡಲ್ ಅಧಿಕಾರಿ:**
ಕೃಷಿ ಹವಾಮಾನ ವಿಭಾಗ
**ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು**

**ಮೊಬೈಲ್ ಆಪ್:**

- ರೈತರು "ದಾಮಿನಿ" ಎಂಬ ತಂತ್ರಾಂಶವನ್ನು ಗೂಗಲ್ ಪ್ಲೇ ಸ್ಟೋರ್‌ನಿಂದ ಡೌನ್ ಲೋಡ್ ಮಾಡಿಕೊಂಡರೆ ಇದರಿಂದ ಮಿಂಚಿನ ಮುನ್ಸೂಚನೆಯನ್ನು ಅತ್ಯಂತ ನಿಖರವಾಗಿ ತಿಳಿಯಬಹುದು.
- ಹಾಗೆಯೇ "ಮೌಸಮ್" ಮತ್ತು "ಮೇಘದೂತ್" ತಂತ್ರಾಂಶಗಳಿಂದ ಮಳೆಯ ಮುನ್ಸೂಚನೆ ಮತ್ತು ಕೃಷಿ ಸಲಹೆಗಳನ್ನು ಪಡೆಯಲು ಸೂಚಿಸಲಾಗಿದೆ.

ಹೆಚ್ಚಿನ ಮಾಹಿತಿಗೆ *mausam.imd.gov.in* ಜಾಲತಾಣದಲ್ಲಿ ಮಾಹಿತಿ ಪಡೆಯಿರಿ.